# ತಂಪುತಾಣ ಈ ತಂಗುದಾಣ!




ಸಾರ್ವಜನಿಕ ಬಸ್ ತಂಗುದಾಣಗಳು ಎಂದಾಕ್ಷಣ ಕಸದ ರಾಶಿ, ಕೊಳಕು ಪರಿಸರ, ದೂಳು ಮುಸುಕಿದ ಆಸನಗಳ ಚಿತ್ರಣ ಕಣ್ಣಮುಂದೆ ಬರುತ್ತದೆ. ಅದಕ್ಕಿಂತ ಭಿನ್ನವಾಗಿ ಜನ ಬಯಸುವ ಸ್ವಚ್ಛತೆಯ ಬಸ್‌ನಿಲ್ದಾಣ ಬೆಳ್ತಂಗಡಿ ತಾಲ್ಲೂಕಿನ ನಾರಾವಿ ಎಂಬ ಊರಿನಲ್ಲಿದೆ.

ನೆರಳು ನೀಡುವ ಪವಿತ್ರ ಅಶ್ವತ್ಥಮರದ ಎಲೆಯ ಆಕಾರದಲ್ಲಿ ಯಕ್ಷಗಾನದ ಕೇದಗೆ ಮುಂದಲೆಯನ್ನು ಹೋಲುವ ಮೂರು ಪದರದ ಛಾವಣಿಯಿಂದಾಗಿ ಒಳಗೆ ತಂಪಾದ ವಾತಾವರಣವಿದೆ. ಫ್ಯಾನ್, ಗಡಿಯಾರ, ಗ್ರಾನೈಟ್ ನೆಲಹಾಸು, ನಿಲುವುಗನ್ನಡಿ, ರೂಟ್‌ಮ್ಯಾಪ್, ಸಿಸಿಟಿವಿ, ಎಫ್.ಎಂ. ರೇಡಿಯೋ, ಬಸ್ಸುಗಳ ವೇಳಾಪಟ್ಟಿ, ಹಸಿರು ಉದ್ಯಾನಗಳಲ್ಲದೆ ಪ್ರಯಾಣಿಕರ ದಾಹ ತೀರಿಸಲು ತಂಪು ಹಾಗೂ ಬಿಸಿ ಫಿಲ್ಟರ್ ನೀರಿನ ವ್ಯವಸ್ಥೆಯಿದೆ.

ಜರ್ಮನ್ ಪ್ರವಾಸದ ವೇಳೆ ಕಂಡ ಸುಸಜ್ಜಿತ ಬಸ್‌ನಿಲ್ದಾಣಗಳ ಪ್ರೇರಣೆಯಿಂದ ರಾಮೇರ ಗುತ್ತು ಮನೆಯವರು ತಮ್ಮ ಹೆತ್ತವರ ಸವಿನೆನಪಿಗಾಗಿ ಈ ಬಸ್‌ಸ್ಟಾಪ್ ನಿರ್ಮಿಸಿದ್ದಾರೆ. 'ಸ್ವಚ್ಛ ಭಾರತ ಸುಂದರ ಭಾರತ' ಎಂಬ ಕನಸು ಇಲ್ಲಿ ನನಸಾಗಿದೆ.

**-ಡಾ.ವೇಣುಗೋಪಾಲ ಶರ್ಮಾ, ಗುರುವಾಯನಕೆರೆ**



# ಬೃಹತ್ ಹೂಗಳ ಯಕ್ಷಗಾನ ಮುಖವಾಡ

ಇತ್ತೀಚೆಗೆ ಉಡುಪಿಯ ದೊಡ್ಡಣ್ಣ ಗುಡ್ಡೆಯಲ್ಲಿ ತೋಟಗಾರಿಕೆ ಇಲಾಖೆಯವರು ಏರ್ಪಡಿಸಿದ್ದ ಫಲಪುಷ್ಪ ಪ್ರದರ್ಶನದಲ್ಲಿ ಬಣ್ಣ ಬಣ್ಣದ ನೂರಾರು ಗುಲಾಬಿ, ಚೆಂಡು ಹೂ (ಗೊಂಡೆ) ಮತ್ತು ಇತರ ಅಲಂಕಾರ ಹೂಗಳಿಂದ ರಚಿಸಿದ ಬೃಹತ್ ಯಕ್ಷಗಾನದ ಮುಖವಾಡ ಜನರ ಮೆಚ್ಚುಗೆಗೆ ಪಾತ್ರವಾಗಿದೆ. ಕರ್ಣ ಕುಂಡಲವನ್ನು ಚೀನೀಕಾಯಿಯಿಂದ ರಚಿಸಲಾಗಿದೆ.

**-ಲಕ್ಷ್ಮಣ ಶೆಣೈ ಎನ್., ಬಂಟ್ವಾಳ**

# ಬಸವನ ಬೊಂಬೆಗಳು

ನಮ್ಮ ರೈತರು ಎತ್ತುಗಳನ್ನು ತಮ್ಮ ಮನೆಯ ದೇವರಂತೆ ಪೂಜಿಸುತ್ತಾರೆ. ಅವುಗಳನ್ನು ಪ್ರತಿ ಸೋಮವಾರ ತೊಳೆದು ಭಕ್ತಿಯಿಂದ ಪೂಜೆ ಮಾಡುತ್ತಾರೆ. ಅಷ್ಟೆ ಅಲ್ಲದೆ ತಮ್ಮ ಮನೆಯ ಮುಖ್ಯ ಬಾಗಿಲುಗಳಿಗೆ ಅವುಗಳ ಮುಖವಾಡ ತೂಗು ಬಿಟ್ಟಿರುತ್ತಾರೆ. ಶಾಂತಿ ಮತ್ತು ಸಮಾಧಾನವನ್ನು ಅವು ನೀಡುತ್ತವೆ ಎಂಬುದು ಅವರ ಬಲವಾದ ನಂಬಿಕೆಯಾಗಿದೆ. ಇಂದಿಗೂ ಈ ಬಸವಣ್ಣನ ಮುಖಗಳನ್ನು ನಾವು ಹಳ್ಳಿ ಮನೆಗಳಲ್ಲಿ ಕಾಣಬಹುದಾಗಿದೆ. ಉಳವಿ ಜಾತ್ರೆಯಲ್ಲಿ ಈ ಮುಖಗಳು ಹೆಚ್ಚು ಮಾರಾಟವಾಗುತ್ತವೆ. ನಮ್ಮ ಮಿತ್ರರ ಮನೆಯಲ್ಲಿ ಈಗಲೂ ಕಂಡು ಬಂದ ಬಸವಣ್ಣನ ಮುಖವಾಡಗಳಿವು.

**-ಕೆ.ಪಿ. ರಾಮಗುಂಡಿ, ಬೈಲಹೊಂಗಲ**

